Regd No. M 1299 SATYAVADI Foundcd 1917

ಸತ್ಯವಾದಿ

ವಾರಪತ್ರಿಕೆ ಸೇರಿ ತಿಂಗಳಿಗೆ ಚಂದಾ 6ಆಣೆ ಸಂಪುಟ 28 ಸಂಚಿಕೆ 117] ಮಂಗಳವಾರ 9—3—1943 [3 ಪೈ

ಇಲ್ಲೆನ್ ಪ್ರಾಂತ್ಯದಿಂದ ನಾಜಿಗಳ ವಾಪಸ್

ವಿವಿಧ ವರ್ತಮಾನ

ಜಪಾನಿಯರ ಮೂರು ವ್ಯಾಪಾರದ ಹಡಗುಗಳನ್ನು ರಂಗೂನ್ ನದಿಯಲ್ಲಿ ಮುಳುಗಿಸಲ್ಪಟ್ಟಿವೆ ಅಥವಾ ನಷ್ಟಗೊಳಿಸಲ್ಪಟ್ಟಿವೆ ಎಂದು ತಿಳಿಯುಬಂದಿದೆ.

ಮದ್ರಾಸಿನ ಉಪಯೋಗಕ್ಕಾಗಿ ಮತ್ತೆ 800 ಟನ್ ಗೋಧಿಯು ಆಸ್ಟ್ರೇಲಿಯಾದಿಂದ ಬಂದಿರುತ್ತದೆ.

ಕ್ವಿನೈನ್ ಅಭಾವವನ್ನು ತಪ್ಪಿಸಲು ಬೀಹಾರ್ ಸರಕಾರವು ರಾಂಚಿಯ ನಾರ್ಕುಂನಲ್ಲಿ ಒಂದು ಡಿಪೋ ತೆರೆದಿದ್ದಾರೆ.

57 ಮಂದಿ ಡೈನೀ ರಾಜಕೀಯ ಮುಖಂಡರು 'ಬಾರ್ಸಿಲೋನಾ ಮೂಲಕ ಲಿಸ್ಬನ್‌ಗೆ ಪ್ರಯಾಣ ಮಾಡಿದರು.

ಅಖಿಲ ಭಾರತ ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ವಿ. ಡಿ. ಸಾವರ್ಕರವರು ಪ್ರೆಸಿಡೆಂಟ್ ರೂಸ್‌ವೆಲ್ಟರ ಪ್ರತಿನಿಧಿಯಾದ ಮಿ || ವಿಲಿಯಂ ಫಿಲಿಪ್ಸ್‌ರನ್ನು ಭೇಟಿಮಾಡಿದರೆಂದು ತಿಳಿಯಬಂದಿದೆ.

ಇನ್ನೊಂದು ಸಕ್ಕ ಕಾಲದಲ್ಲಿ ಮಹಾತ್ಮಾ ಗಾಂಧಿಯವರು ತಮ್ಮ ಹಿಂದಿನ ಸ್ಥಿತಿಗೆ ಬರುವರೆಂದು ಶ್ರೀ ದೇವದಾಸ ಗಾಂಧಿಯವರು ಪೂನಾದಿಂದ ಹಿಂತಿರುಗಿ ಬಂದನಂತರ ಹೇಳಿದ್ದಾರೆ.

ಗೌಹತಿಯ ಸಲ್ಬಾರಿ ಪೋಲೀಸ್ ಸ್ಟೇಷನ್ನಿನ ಪ್ರದೇಶಗಳಲ್ಲಿ ಮಾಲಿಕರ ಒಳಿಯಲ್ಲದ್ದ ಕೆಲವು ಬಂಗೂಕಗಳು ಮಾಯವಾಗಿವೆಯೆಂದೂ ಅದರ ಶೋಧನೆಯು ನಡೆಯುತ್ತಿದೆಯೆಂದೂ ತಿಳಿಯಬಂದಿದೆ

ಭಂಗಾರ ಬೆಳ್ಳಿ ಧಾರಣೆ

ಬಂಗಾರ ತೋಲ ರೂ. 67—8—0
ಬೆಳ್ಳಿ ,, 1—1—6

Latest

ಬ್ರಿಟನ್ನಿನ ಮೇಲೆ ಧಾಳಿ ನಡೆಸಲು ಬಂದಿದ್ದ ನಾಜೀ ವಿಮಾನಗಳ ಪೈಕಿ 3 ಹೊಡೆಹುರುಳಿಸಲ್ಪಟ್ಟವು.

ಆಂ. ಎ. ಎಫ್ ನವರು ಹೆಲಿಗೊಲ್ಯಾಂಡಿನ ಮೇಲೆ ಧಾಳಿ ನಡೆಸಿರುವುದಾಗಿ ಜರ್ಮನ್ ರೇಡಿಯೋ ತಿಳಿಸಿದೆ.

ಜಾಟ್ಸ್‌ನಿಂದ 30 ಮೈಲಿ ಅಚೆ ಇರುವ ಸಿಐವ್ ತ್ಯಜಿಸಿರುವುದನ್ನು ಜರ್ಮನ್ ರೇಡಿಯೋ ಒಪ್ಪಿರುತ್ತದೆ.

ಡಾರ್ನಿಕ್ ಮೇಲೆ ಒಂದು ಜಪಾನೀ ಬಾಂಬರ್ ಹೊಡೆದುರುಳಿಸಲ್ಪಟ್ಟಿತು.

ಮುಸಲೋನಿಗೆ ಹಿಟ್ಲರಿನ ಸಂದೇಶ

ಹಿಟ್ಲರನು ಮುಸಲೋನಿಗೆ ಒಂದು ಸಂದೇಶವನ್ನು ರಿಬ್ಬೆಂಟ್ರಾಪನ್ನು ಮುಖಾಂತರ ಕಳುಹಿಸಿರುವನು. ರಿಬ್ಬೆಂಟ್ರಾಪನ ಇಟಲಿಯಲ್ಲಿ ಮುಸೋಲನಿಯೊಡನೆ ತಾ || 24 ರಿಂದ 28 ರವರಿಗಿದ್ದನು, ರಿಬ್ಬೆಂಟ್ರಾಪಿನ ಈ ಸಂದರ್ಶನಕ್ಕೆ ಹೆಚ್ಚಿನ ಮಹತ್ವವು ಕೊಡಲಾಗಿದೆ ಈ ಸಂದರ್ಶನದ ವಿವರವು ಇನ್ನೂ ಗುಟ್ಟಾಗಿದ್ದರೂ ಅಕ್ಷರಾಷ್ಟ್ರಗಳು ಸಂಧಾನ ಮಾಡಿಕೊಳ್ಳುವ ಪ್ರಯತ್ನದಲ್ಲಿರುವರೆಂದು ಹಲವರು ಹೇಳುತ್ತಾರೆ

ಬೇಕಾಗಿದ್ದಾರೆ

ಚೆನ್ನಾಗಿ ಕೆಲಸ ಮಾಡಬಲ್ಲ ಕನ್ನಡ ಕಂಪಾಜಿಟರುಗಳು ಕೂಡಲೇ ಬೇಕಾಗಿದ್ದಾರೆ, ಹೆಚ್ಚಿನ ವಿಷಯಗಳನ್ನು ಮೊಖಾ ವಿಚಾರಿಸಿ ತಿಳಿಯಬಹುದು.

ಮ್ಯಾನೇಜರ್, ಸತ್ಯವಾದಿ ಪ್ರೆಸ್

ರಷ್ಯನರು ಸುತ್ತುವರಿಮದರಿಂದ ಅಲ್ಲಿ ಉಳಿಯಲು ಸರ್ವಥಾ ಅವಕಾಶವಾಗದೆ ಜರ್ಮನರು ಇಲ್ಮೆಕ್ ಸರೋವರದ ಪ್ರಾಂತ್ಯದಿಂದ ಹಿಂಡಿರುಗಿದರೆಂದು ತಿಳಿಯು ಬಂದಿದೆ.

ರಷ್ಯನರು ಗ್ಜಾಟಸ್ಕನ್ನು ಪಡೆದಲಿನಿಂದ ಆಕ್ರಮಿಸಿದುದರ ಫಲವಾಗಿ ಒಳಗಿನ ರಕ್ಷಣಾ ಸ್ಥಳಗಳೆಲ್ಲ ರಷ್ಯನರ ವಶವಾಗಿವೆಯೆಂದೂ ಈಗ ಅದೇ ಸ್ಥಳದಲ್ಲಿ ಮುಂದುವರಿಯುತ್ತಿರುವರೆಂದೂ ಅರಿಯಲಾಗಿದೆ. ಜರ್ಮನ್ ಸುದ್ದಿಯಂತೆಯೂ ಗ್ಜಾಟಸ್ಕನ್ನು ತೆರವು ಮಾಡಿದ್ದಾರೆ,

ಇಂದಿನ ವರ್ತಮಾನ

ಕನಡಾ ರಾಜ್ಯವು ಸಂಯುಕ್ತ ರಾಷ್ಟ್ರಗಳ ಮತದೆಂತೆ ಯುದ್ಧಕ್ಕಾಗಿ ವೆಚ್ಚಮಾಡಲು 22½ ಪೌಂಡು ಮಿಲಿಯನ್ ಪೌಂಡುಗಳನ್ನು ಎರಡನೆಯ ಕಿಸ್ತಾಗಿ ಕೊಡಲು ನಿಶ್ಚಯಿಸಿದೆ.

ಬರ್ಲಿನ್ ನಗರದ ರಕ್ಷಣಾಸ್ಥಾನಪತಿಯಾದ ಗೋಬಲ್ಸ್‌ರವರು ಬರ್ಲಿನ್ನಿನ ಜನರಿಗೆ ಒಂದು ವಿಜ್ಞಾಪನೆಯನ್ನು ಮಾಡಿ ಅದರಲ್ಲಿ ಈಚಿನ ಬ್ರಿಟಷ್ ಧಾಳಿಯಿಂದ ಆಗಿರುವ ಅಗಾಧವಾದ ನಷ್ಟವನ್ನು ಕೂಡಿಸಲು ಜನಸಮುದಾಯದಲ್ಲಿನ ಎಲ್ಲ ಸೈನಿಕ ವರ್ಗವೂ ಕೂಡಬೇಕೆಂದು ಕೇಳಿಕೊಂಡಿದ್ದಾರೆ.

ಪೆಸಿಫಿಕ್ ಸಾಗರದ ನೈಋತ್ಯ ಭಾಗದಲ್ಲಿನ ಅನೇಕ ಶತ್ರುಸ್ಥಾನಗಳು ಆಕ್ರಮಿತವಾದುವೆಂದೂ, ನ್ಯೂಗಿನಿಯ ಹೊರಭಾಗದಲ್ಲಿದ್ದ ಜಪಾನೀ ಹಡಗುಗಳ ಮೇಲೆ ಬಾಂಬು ಹಾಕಲಾಯಿತೆಂದೂ, ಸುದ್ದಿ ಬಂದಿದೆ.

ಅಜ್ಞಾನಾವಸ್ಥೆಯು ಉಂಟಾಗುವುದಾದರೆ ಆಗ ತಮಗೆ ಯಾವುದೇ ವಿಧವಾದ ಪೋಷಕವಸ್ತುಗಳದ್ದೂ ತಿನ್ನಿಸಬಂದೆಂದೂ ಮಹಾತ್ಮಾ ಗಾಂಧಿಯವರು ಹೇಳಿದ್ದರೆಂದೂ, ಅದನ್ನು ಕಟ್ಟುನಿಟ್ಟಾಗಿ ಅನುಸರಿಸಿಲಾಯಿತೆಂದೂ ಡಾ || ರಾಯ್‌ರವರು ಹೇಳಿದ್ದಾರೆ.

ಕೇಂದ್ರ ಶಾಸನ ಸಭೆಯಲ್ಲಿ ಡಾ || ದೇಶಮುಖರು ಚರ್ಚಿಸಲು ತಂದಿದ್ದ ಮದ್ರಾಸು ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾದ ಡಾ || ಲಕ್ಷ್ಮಣ ಮೊದಲಿಯಾರ್‌ರವರು ರಿಜರ್ವ್ ಮಾಡಿದ್ದ ಸ್ಥಾನವನ್ನು, ಒಬ್ಬ ಯೂರೋಪಿಯನ್ನನು ಆಕ್ರಮಿಸಿದ ಬಗ್ಗೆ ಪ್ರಾಸಿಕ್ಯೂಷನ್ ಮಾಡುವದನ್ನು ಅನುಸರಿಸಲಿಲ್ಲವೆಂದು ಆಕ್ಷೇಪಿಸಿದರು, ಈ ನಿಲವಳಿ ಸೂಚನೆಯು ತಳ್ಳಿಹಾಕಲ್ಪಟ್ಟಿತು.

ಈ ವಾರದ ಭವಿಷ್ಯ

ಕೃಷ್ಣಾಪುರದ ವೆಂಕಟನರಸಿಂಹಾಚಾರ್
ಶ್ರೀ ರಾಮಕೃಷ್ಣ ಜ್ಯೋತಿಷಾಲಯ

ಮೇಷ

ನೀವು ತುಂಬ ವಿಚಾರದಿ ಉದ್ಯೋಗ ವಹಿಸಿರಿ. ನಿಮಗೆ ಏನೂ ಆತಂಕಗಳಿಲ್ಲ. ಸಾರ್ವಜನಿಕ ಕೆಲಸಗಳಲ್ಲಿ ಮುಂದೆ ಒರುವಿರಿ. ಎಲ್ಲ ಜನರ ಅನುಕೂಲತೆಯು ಚೆನ್ನಾಗಿದೆ. ಮನಸ್ಸಿಗೆ ಆಹ್ಲಾದ.

ವೃಷಭ

ಹಣವನ್ನು ಆದಷ್ಟು ಜಾಗ್ರತನದಿಂದ ವಿಚರ್ಮಾಡಿ. ಹೊಸ ಉದ್ಯೋಗಗಳಲ್ಲಿ ಕೈಹಾಕುವಿರಿ.

ಮಿಥುನ

ಪ್ರವಾಸದಲ್ಲಿ ತೊಂದರೆಯಿದೆ. ಮಾನಸಿಕ ವ್ಯಥೆ.

ಕರ್ಕಾಟಕ

ಸ್ಥಿತಿಗತಿಗಳು ತಕ್ಕಷ್ಟಿಗಿವೆ. ಅಂತಹ ಆತಂಕಗಳೇನೂ ಇಲ್ಲ. ಹಣಕಾಸಿನ ಸ್ಥಿತಿ ತಕ್ಕವಷ್ಟಿಗೆ.

ಸಿಂಹ

ಒಳ್ಳೆ ಕಾಲವಾಗಿದೆ. ಆರ್ಥಿಕ ಸ್ಥಿತಿ ಉತ್ತಮ. ಶತ್ರುಗಳ ಆಟ ನಡೆಯುಲಾರದು.

ಕನ್ಯಾ

ಅನಾನುಕೂಲಗಳೇನೂ ಕಂಡುಬರುವದಿಲ್ಲ. ಅಧಿಕಾರ ವರ್ಗದಿಂದ ಸಹಾಯವಿದೆ.

ತುಲಾ

ಸ್ವಲ್ಪ ಕಷ್ಟ ಕಾಲ. ಏನಾದರೊಂದು ತಾಪತ್ರಯ.

ವೃಶ್ಚಿಕ

ಜಾರಲ್ಲಿ ಮಾನಮಂರ್ಯಾದೆ ಚೆನ್ನಾಗಿದೆ. ಯತ್ನ ಕಾರ್ಯದಲ್ಲಿ ಜಯ.

ಧನು

ಒಳ್ಳೇಕಾಲ. ಧನಾನುಕೂಲ ಚೆನ್ನಾಗಿದೆ. ಪ್ರವಾಸದಲ್ಲಿ ಹುಷಾರಿನಿಂದ ವರ್ತಿಸಿ.

ಮಕರ

ಕಷ್ಟನಷ್ಟಗಳಿವೆ ಹೆದರಬೇಡಿ. ಹಿತ ಶತ್ರುಗಳ ಕಾಟವಿದೆ. ಜಾಗರೂಕರಾಗಿರಿ.

ಕುಂಭ

ಅಕಸ್ಮಾತ್ ಅಪಘಾತ ಒದಗುವ ಪ್ರಸಂಗವಿದೆ. ಆಸ್ತವರ್ಗದವರೊಡನೆ ಕಲಹ ಬರಬೇಡಿ.

ಮೀನ

ಧೈರ್ಯಗೊಂಡು ಹಿಡಿದ ಉದ್ಯೋಗವನ್ನು ಪೂರ್ಣಮಾಡಿ. ಬಂಧುಮಿತ್ರರ ಸಹಾಯವಿದೆ.

ಸಂಸ್ಥಾನದ ಸುದ್ದಿಗಳು

ಸರ್ದಾರ್ ಕೆ. ಪಿ. ವೆಂಕಟರಾಮಯ್ಯನವರನ್ನು ಬೆಂಗಳೂರು ಸಿಟಿ ಪೊಲಿಟಿಕಲ್ ಬ್ರಾಂಚ್ ಪೋಲೀಸಿನವರು ಒಬ್ಬ ಗೂಡಿ ಪೋಲೀಸರ ಸಹಾಯದಿಂದ ಶನಿವಾರ ರಾತ್ರೆ ಯಡಿಯಾರಿನ ಒಳಿ ಇರುವ ತೋಟದಲ್ಲಿ ಡಿಫೆನ್ಸ್ ಆಫ್ ಇಂಡಿಯಾ ಕಾನೂನಿನ ನೋರೆ ದಸ್ತಗಿರಿ ಮಾಡಿದರು. ಜಿಲ್ಲಾಧಿಕಾರಿಗಳ ಆಜ್ಞೆ ನೋರೆ ಸೆಂಟ್ರಲ್ ಜೈಲಿಗೆ ಡಿಟೆಂರ್ಷಗೋಸ್ಕರ ಕರೆದೊಯ್ಯಲಾಯಿತು

ಂ ಂ ಂ

ಮೈಸೂರು 3 ನೇ ಪದಕತಿ ದಳದ ಸೈನ್ಯದ ಸೇನಾಪತಿಗಳಾದ ಲೆ. ಕ. ಡಿ. ನಂಜರಾಜ ಬಹದ್ದೂರ್‌ರವರು, ತಮ್ಮ ಆದಳದ ನಾಯಕನಾದ ಇಗ್ನೆಷಸ್ ಡಸೌಜಾ ಎಂಬುವನು ರೂ. 553-1-6 ಅಪಹರಿಸಿಕೊಂಡು ಹೋಗಿದ್ದಾನೆಂದು ದೂರುಕೊಟ್ಟ ಪ್ರಯುಕ್ತ ಪೋಲೀಸಿನವರು ವಿಚಾರಣೆಗೆ ಪ್ರಯತ್ನಿಸುತ್ತಿದ್ದಾರೆಂದು ತಿಳಿಯಬಂದಿದೆ.

ಂ ಂ ಂ

ನೊಸ್ಟೆ ಬೆಂಗಳೂರು ವಾರಭೆಯು ವಿಶೇಷ ಮೀಟಿಂಗು ನಡೆದಾಗ ಶ್ರೀ ರಾಜುರವರು ಪ್ರಾರಂಭದಲ್ಲಿ ಒಂದು ನಿರ್ಣಯವನ್ನು ತಂದು. ಮಹಾತ್ಮಾ ಗಾಂಧಿಯವರು ತಮ್ಮ ಉಪವಾಸವನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿದ್ದಕ್ಕಾಗಿ ಅವರಿಗೆ ಕೌನ್ಸಿಲ್ಲಿನ ಹೃತ್ಪೂರ್ವಕ ಅಭಿನಂದನೆಗಳನ್ನು ಅರ್ಪಿಸಬೇಕೆಂದೂ ಮಹಾತ್ಮಾ ಗಾಂಧಿಯವರ ಜೀವವನ್ನು ಉಳಿಸಿಕೊಟ್ಟದ್ದಕ್ಕಾಗಿ ಭಗವಂತನಿಗೆ ಕೃತಜ್ಞತೆಯನ್ನೂ ಸೂಚಿಸಬೇಗೆಂದು ಅಪೇಕ್ಷಿಸಿದರು. ಅಧ್ಯಕ್ಷರು ನಿರ್ಣಯವನ್ನು ಸೂಚಿಸಲು ಅವಕಾಶವಿಲ್ಲವೆಂದು ರೂಲಿಂಗ್ ಕೊಟ್ಟರು.

ಂ ಂ ಂ

ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯ ವಾರ್ಷಿಕ ವಿಾಟಿಂಗು ನಾಡಿದ್ದು ನಡೆಯುವುದಾಗಿ ತಿಳಿಬಂದಿದೆ.

ಸೂಚನೆ

ಪ್ರಿಂಟಿಂಗ್ ವಿಷಯ ಕೆಟ್ಟು ಹೋಗಿರುವದರಿಂದ, ಎರಡು ದಿವಸಗಳು ಪತ್ರಿಕೆಯನ್ನು ಪ್ರಕಟಿಸಲು ಸಾಧ್ಯವಿಲವಾಗಿದೆ. ಈ ಬಿಟ್ಟು ಹೋದ ಸಂಚಿಕೆಗಳಿಗಾಗಿ ಮುಂದೆ ಹೆಚ್ಚು ಪುಟಗಳನ್ನು ಸೇರಿಸಿಕೊಡಲಾಗುತ್ತೆ. ಮ್ಯಾನೇಜರ್,

ಅಪೆರ
ಕೃಷ್ಣರಾಯಭಾರಿ.

ಸತ್ಯವಾದಿ ಪತ್ರಿಕೆಗೆ
ಚಂದಾದಾರಾಗಿರಿ

ದಿನ ಮತ್ತು ವಾರಪತ್ರಿಕೆಗೆ

ಚಂದಾ ಮೈಸೂರು ಮತ್ತು ಏಜೆಂಟರಿರ ತೆಕ್ಕ ಸ್ಥಳದಲ್ಲಿ ತಿಂಗಳಿಗೆ 6 ಆಣೆ

ವಾರಪತ್ರಿಕೆಗೆ

ಪರಸ್ಥಳಕ್ಕೆ ಚಂದಾ ವರ್ಷಕ್ಕೆ ಅಂಚೆವೆಚ್ಚ ಸೇರಿ ರೂ 1--12--0

ಪಿ. ಮಂಜಪ್ಪ, ಬೀಡಿ ಮರ್ಚೆಂಟ್
ಮಂಗಳೂರು ಗಣಪತಿ, ಸುವರ್ಣಾ
ಗಜಾನನ ಬಿ?ಡಿಗಳನ್ನೆ ಉಪಯೋಗಿಸಿ
ಹಳೇ ಅಗ್ರಹಾರ, ಮೈಸೂರು.

ಶ್ರೀ ಪರಶುರಾಂ ಹಾಲ್
ಪ್ರೊ॥ಧೆಂಡೋಜಿರಾವ್
ಎಂಡ್ ಸನ್ಸ್
ಸಯ್ಯಾಜಿರಾವ್ ರೋಡು
ಮೈಸೂರು
ನಮ್ಮಲ್ಲಿ ಎಲ್ಲಾ ವಿಧದ ಬಟ್ಟೆಗಳೂ, ಕ್ವಲ್ಟಿಗಳೂ, ಸುಲಭ ಬೆಲೆಗೆ ದೊರೆಯುತ್ತೆ. ಮತ್ತು ಹೊಲಿಗೆ ಕೆಲಸವು ನಿಮ್ಮ ಮನ ಒಪ್ಪುವಂತೆ ಅಂದವಾಗಿ ಮಾಡಲಾಗುತ್ತೆ

Edited, Printed & pnblished by M. S. Krishna Rao, at the Satyavadi P r e s s. Chamaraja Agrahar, Mysore.

SHAKTI SUDHA
will make you STRONG

ನಿಮ್ಮ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ಎದುರುನೋಡಿ
— ಹೆಚ್ ಆರ್. ಜಿ. ಸಿ. ಯವರ —

ಶ್ರೀ ಪಿಕ್ಚರ್ಸ್
ಗಾಂಧಿಸ್ಕೆಚರ್, ಮೈಸೂರು ಇವರ
ಸಂಗೀತರತ್ನ ಅಸಾಮಾನ ವಿದ್ವಾನ್ ಟಿ ಚೌಡಯ್ಯನವರು, ಕಲ್ಚರ್ಡ್ ಕಮೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)
ಸುಂದರ ಮಾಹಜ ಚಿತ್ರ

ಅಕ್ಕರ ಸಾಮಾಜಿಕ
ಭಾವಪರಿಪೂರ್ಣವಾದ ಕಥೆ
ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ. ಪೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು
ದೊರೆಯುವ ಸ್ಥಳ—,
ಸತ್ಯವಾದಿ ಆಫೀಸ್ ಮೈಸೂರು
ಶ್ರೀ ರಾಮಚಂದ್ರ ಬುಕ್ ಡಿಪೋ
ದೇವರಾಜ ಮಾರ್ಕೆಟ್, ಮೈಸೂರು

ಶಕ್ತಿ ಸಾಧನೆಗೆ ಸುಲಭೋಪಾಯವು

ಶಕ್ತಿ ಸುಧಾ

ಸೇವನೆ ಎಂಬುವುದು ನಿಮ್ಮ ಜ್ಞಾಪಕದಲ್ಲಿರಲಿ